**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್.ಸಿ, ಹರಿಹರ**
**<u>ಸಿ. ಸಿ. 27/2016</u>**

**ಪಿ. ಡಬ್ಲ್ಯೂ. 44**
**ಸಿ. ಡಬ್ಲ್ಯೂ. 51**

**ಹೆಸರುಃ** **ಮುದ್ದಪ್ಪ**

**ತಂದೆಃ** **ಕೊಟ್ರಪ್ಪ**

**ವಯಸ್ಸುಃ** **80 ವರ್ಷ.**

**ಕೆಲಸಃ** **ವ್ಯವಸಾಯ.**

**ವಾಸಃ** **ಮಾಕನೂರು ಗ್ರಾಮ.**

ಇಂದು ದಿನಾಂಕ**:01-04-2021** <u>ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆಃ ಸ.ಸ.ಅ ವಕೀಲರಿಂದಃ</u>**

ಆರೋಪಿ ಪರಿಚಯ. ಆರೋಪಿ ಭತ್ತದ ವ್ಯಪಾರ ಮಾಡುತ್ತಿದ್ದ ಹಾಗಾಗಿ ಗೊತ್ತು. ನನಗೆ ಸೇರಿದ ಜಮಿನಿನಲ್ಲಿ 2010 ರಲ್ಲಿ ಭತ್ತ ಬೆಳೆದಿದ್ದೆ ಸದರಿ ಭತ್ತವನ್ನು ಆರೋಪಿಗೆ ಕೊಟ್ಟಿರುತ್ತೇನೆ. 275 ಚೀಲ ಭತ್ತವನ್ನು ಪ್ರತಿ ಕ್ವಿಂಟಲ್ 1055 ರೂ ಗಳಂತೆ ಮಾರಾಟ ಮಾಡಿರುತ್ತೇನೆ. ನನಗೆ 2,79,779/- ರೂ ಕೊಡಬೇಕಾಗಿತ್ತು. ಸದರಿ ಹಣವನ್ನು 1 ತಿಂಗಳು ಬಿಟ್ಟು ಕೊಡುತ್ತೇನೆ ಎಂದು ಹೇಳಿದ್ದರು. ನನ್ನ ಜೊತೆ ಮಂಜಪ್ಪ , ಚನ್ನಬಸಪ್ಪ ಮತ್ತು ಉಜ್ಜಪ್ಪ ಭತ್ತವನ್ನು ಆರೋಪಿಗೆ ಕೊಟ್ಟಿರುತ್ತಾರೆ. ನಾನು ಮತ್ತು ಮೇಲೆ ಹೇಳಿದ 3 ಜನರು ಸೇರಿ ಒಟ್ಟು 647 ಚೀಲ ಭತ್ತ ಮಾರಾಟ ಮಾಡಿರುತ್ತೇವೆ. ಆರೋಪಿ 1 ತಿಂಗಳು ಬಿಟ್ಟು ಹಣ ಕೊಡಲಿಲ್ಲ ಮಿಲ್ ನಲ್ಲಿದ್ದ ಸುರೇಶನನ್ನು ಕೇಳಲಾಗಿ ಆರೋಪಿ ಮನೆ ಬಿಟ್ಟು ಹೋಗಿರುತ್ತಾನೆ ಎಂದು ಹೇಳಿರುತ್ತಾನೆ. ನಂತರ ನಾವು ಕೇಸನ್ನು ಮಾಡಿರುತ್ತೇವೆ. ಕುಣೆ ಬೆಳಕೆರೆಯ ಬೆಳೆಕೆರಪ್ಪ ಪಿರ್ಯಾದಿಯನ್ನು ಕೊಟ್ಟಿರುತ್ತಾನೆ. ನಾನು ಪೋಲೀಸರಿಗೆ ನನ್ನ ಜಮೀನು ಸರ್ವೆ ನಂಬರ್ 131, 134 ಮತ್ತು 5 ಇವುಗಳ ಪಹಣಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿ ಸದರಿ ಪಹಣಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 33 ರಿಂದ 35 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸಾಕ್ಷಿ ಭಾಗಶಃ ಪ್ರತಿಕೂಲ ಆಗಿದೆ ಎಂದು ಪಾಟೀಸವಾಲಿಗೆ ಅನುಮತಿಸಬೇಕೆಂದು ಸ.ಸ.ಅ ರವರಿಂದ ಕೋರಿದ್ದು , ಕೋರಿಕೆಯನ್ನು ಮನ್ನಿಸಲಾಯಿತು.)

**ಪಿ. ಡಬ್ಲ್ಯೂ. 44**
**ಸಿ. ಡಬ್ಲ್ಯೂ. 51**

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ಜೀವಿಕ ಎಲೆಕ್ಟ್ರಾನಿಕ್ಸ್ ವೇ ಬ್ರಿಡ್ಜ ಇವರು ನೀಡಿರುವ ಮತ್ತು ಕಿಂಗ್ಸ್ ವೇಜರ್ಸ್ ಇವರು ನೀಡಿರುವ ರಸೀದಿಯನ್ನು ಪೋಲೀಸರಿಗೆ ಕೊಟ್ಟಿರುತ್ತೇನೆ ಎನ್ನುವುದು ನಿಜ. ಸಾಕ್ಷಿ 2 ರಸೀದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 36 ಮತ್ತು 37 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರ ಕೋರಿಕೆಯ ಮೇರಗೆ ಮುಂದೂಡಲಾಯಿತು.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**